# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 14.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ. ಎಂ ಹೆಚ್ ಪಿ ರವರಿಂದ

ನೀವು ಏನು ವಿದ್ಯಾಭ್ಯಾಸ ಮಾಡಿದ್ದೀರಿ ಎಂದರೆ ಎಸ್ ಎಸ್ ಎಲ್ ಸಿ ಎಂದು ನುಡಿಯುತ್ತಾರೆ. ನಿಮಗೆ ಕನ್ನಡ ಚೆನ್ನಾಗಿ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ಜಾಲಗುಣಿ ಗ್ರಾಮದ ಸ.ನಂ.32 ರ ಒಟ್ಟು ವಿಸ್ತೀರ್ಣ 11 ಎಕರೆ 19 ಗುಂಟೆ ಎಂದರೆ ಸರಿ. ಅದರಲ್ಲಿ 14 ಗುಂಟೆ ಖರಾಬು ಕೂಡ ಇರುತ್ತದೆ ಎಂದರೆ ಸರಿ. ಖರಾಬನ್ನು ಕಳೆದು 11 ಎಕರೆ 5 ಗುಂಟೆ ಇರುತ್ತದೆ ಎಂದರೆ ಸರಿ. ಸ.ನಂ.32 ರಲ್ಲಿ ಮೊದಲು ಒಟ್ಟು 5 ಪೋಡಾಗಳಾಗಿರುತ್ತವೆ ಎಂದರೆ ಸರಿ. ಮೊದಲು ಬಸವರಾಜು ರವರಿಗೆ ಸ.ನಂ.32/1 ರಲ್ಲಿ 3 ಎಕರೆ 32 ವರೆ ಗುಂಟೆ ಜಮೀನು ಇತ್ತು ಎಂದರೆ ಸರಿ. 32/2 ರಲ್ಲಿ ಲಲಿತಬಾಯಿ ರವರಿಗೆ 2 ಎಕರೆ 15 ವರೆ ಗುಂಟೆ ಇತ್ತು ಎಂದರೆ ಸಾಕ್ಷಿಯು ಲಲಿತಬಾಯಿ ರವರಿಗೆ 2 ಎಕರೆ 8 ಗುಂಟೆ ಇತ್ತು ಎಂದು ನುಡಿಯುತ್ತಾರೆ. ಲಲಿತಬಾಯಿ ರವರ ಜಮೀನಿನಲ್ಲಿ 7 ವರೆ ಗುಂಟೆ ಖರಾಬನ್ನು ಕಳೆದು 2 ಎಕರೆ 8 ಗುಂಟೆ ಇತ್ತು ಎಂದರೆ ಸಾಕ್ಷಿಯು 2 ಎಕರೆ 8 ಗುಂಟೆ ಇಡುವಳಿ ಜಮೀನು ಮತ್ತು 7 ಗುಂಟೆ ಖರಾಬು ಇತ್ತು ಎಂದು ನುಡಿಯುತ್ತಾರೆ. ಸ.ನಂ.32/3 ರಲ್ಲಿ ನಿಮ್ಮ ತಂದೆ ಲಕ್ಷ್ಮಣ ರಾವ್ ಮತ್ತು ಹನುಮಂತ ರಾವ್ ಹಾಗೂ ರಾಣಿ ಬಾಯಿ ರವರಿಗೆ 1 ಎಕರೆ 20 ಗುಂಟೆ ಇತ್ತು ಎಂದರೆ ಸರಿ. ಸ.ನಂ.32/4 ರಲ್ಲಿ ಪ್ರತಿವಾದಿಯ ತಂದೆ ಕೃಷ್ಣೋಜೀ

ರಾವ್ ರವರ ಹೆಸರಿಗೆ 1 ಎಕರೆ 34 ಗುಂಟೆ ಇಡುವಳಿ ಜಮೀನು ಮತ್ತು 1 ಗುಂಟೆ ಖರಾಬು ಜಮೀನು ಇತ್ತು ಎಂದರೆ ಸರಿ. ಸ.ನಂ.32/5 ರಲ್ಲಿ ನಿಮ್ಮ ತಂದೆ ಲಕ್ಷ್ಮಣ ರಾವ್ ಮತ್ತು ಹನುಮಂತ ರಾವ್ ಹಾಗೂ ರಾಣಿ ಬಾಯಿ ರವರಿಗೆ 2 ಗುಂಟೆ ಖರಾಬನ್ನು ಸೇರಿ 1 ಎಕರೆ 36 ಗುಂಟೆ ಜಮೀನು ಇತ್ತು ಎಂದರೆ ಸರಿ.

2. ಪ್ರತಿವಾದಿಯ ತಂದೆ ಕೃಷೋಜೀ ರಾವ್ ತಮಗೆ ಇದ್ದ ಸ.ನಂ.35/4 ರ 1 ಎಕರೆ 34 ಗುಂಟೆ ಜಮೀನನ್ನು ದಿಃ 28.03.2016 ರ ನೊಂದಾಯಿತ ದಾನ ಪತ್ರದ ಮೂಲಕ ಪ್ರತಿವಾದಿಗೆ ನೀಡಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿಯ ಅಣ್ಣನಿಗೆ ಕಣ್ಣು ಕಾಣುತ್ತಿರಲಿಲ್ಲ, ಅವರಿಗೆ ಪ್ರತಿವಾದಿಯು ಮೋಸ ಮಾಡಿ ತನ್ನ ಹೆಸರಿಗೆ ದಾನ ಪತ್ರ ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ದಾನ ಪತ್ರದ ಮೂಲಕ ಬಂದ ಆಸ್ತಿಯ ಖಾತೆ ಮತ್ತು ಪಹಣಿಯನ್ನು ಮಾಡಿಕೊಡುವಂತೆ ಕೋರಿ ಪ್ರತಿವಾದಿಯು ತಹಸೀಲ್ದಾರ್ ಕಚೇರಿಗೆ ಅರ್ಜಿಯನ್ನು ಕೂಡ ಸಲ್ಲಿಸಿದ್ದರು ಎಂದರೆ ಸರಿ. ಆಗ ನಿಮ್ಮ ತಂದೆಯ ವಿರುದ್ಧ ತಹಸೀಲ್ದಾರ್ ನ್ಯಾಯಾಲಯದಲ್ಲಿ RRT CR 52/2016-17 ರಂತೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಆ ಪ್ರಕರಣದಲ್ಲಿ ನಿಮ್ಮ ತಂದೆ ದಿಃ 20.09.2016 ರಂದು ತಹಸೀಲ್ದಾರ್ ನ್ಯಾಯಾಲಯಕ್ಕೆ ಹಾಜರಾಗಿ ದಾನ ಪತ್ರದಂತೆ ಸ.ನಂ.32/4 ರ ಖಾತೆ ಮತ್ತು ಪಹಣಿಯನ್ನು ಪ್ರತಿವಾದಿಯ ಹೆಸರಿಗೆ ಮಾಡಲು ತಮ್ಮ ತಂಟೆ ತಕರಾರು ಇರುವುದಿಲ್ಲ ಎಂದು ಹೇಳಿಕೆ ನೀಡಿದ್ದಾರೆ ಎಂದರೆ ಸರಿ. ಆ ಆಧಾರದ ಮೇಲೆ ಪ್ರತಿವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ಬದಲಾವಣೆಯಾಗುವಂತೆ ತಹಸೀಲ್ದಾರ್ ನ್ಯಾಯಾಲಯದಲ್ಲಿ ಈ ಮೇಲ್ಕಂಡ ಪ್ರಕರಣದಲ್ಲಿ ಆದೇಶವಾಗಿತ್ತು ಎಂದರೆ ಸರಿ. ಆ ನಂತರದಲ್ಲಿ ಸ.ನಂ.32/4 ರ 1 ಎಕರೆ 34 ಗುಂಟೆಯ ಪಹಣಿ ಮತ್ತು ಖಾತೆ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ. ಸದರಿ ಸ.ನಂ.32/4 ರ 1 ಎಕರೆ 34 ಗುಂಟೆಯಲ್ಲಿ ಪ್ರತಿವಾದಿಯು ಸ್ವಾಧೀನನಾನುಭವದಲ್ಲಿ ಇದ್ದರು ಎಂದರೆ ಸರಿ.

2. ಪ್ರತಿವಾದಿಯ ಸ.ನಂ.32/4 ರ 1 ಎಕರೆ 34 ಗುಂಟೆಯ ಪೂರ್ವಕ್ಕೆ ನಿಮ್ಮ ಸರ್ವೆ

ನಂ.32/5 ರ 1 ಎಕರೆ 34 ಗುಂಟೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ ಲಲಿತಬಾಯಿ ರವರ ಸ.ನಂ.32/2 ಮತ್ತು ನಿಮ್ಮ ಸ.ನಂ.32/3 ರ ಆಸ್ತಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನ ಉತ್ತರಕ್ಕೆ ಪುಷ್ಪಲತಾ ರವರ ಜಮೀನು ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನ ದಕ್ಷಿಣಕ್ಕೆ ನಂದಿಹಳ್ಳಿ ಗಡಿ ಇರುತ್ತದೆ ಎಂದರೆ ಸರಿ.

3. ನಿಮ್ಮ ಸ.ನಂ.32/5 ರ ಪೂರ್ವಕ್ಕೆ ನಂದೀಹಳ್ಳಿ – ಕಾಟನಹಳ್ಳಿ ರಸ್ತೆ ಇರುತ್ತದೆ ಎಂದರೆ ಸರಿ. ಎತ್ತಿನಹೊಳೆ ಕಾಮಗಾರಿಗೆ ಸ.ನಂ.32 ರ ಆಸ್ತಿಗಳನ್ನು ಸರ್ಕಾರದವರು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸ.ನಂ.32/1 ರಲ್ಲಿ 22 ಗುಂಟೆ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸ.ನಂ.32/2 ರಲ್ಲಿ 22 ವರೆ ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸ.ನಂ.32/4 ರಲ್ಲಿ 11 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸ.ನಂ.32/5 ರಲ್ಲಿ 11 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಎತ್ತಿನಹೊಳೆ ಕಾಮಗಾರಿಯು ಈಗ ಸಂಪೂರ್ಣವಾಗಿ ಮುಕ್ತಾಯಗೊಂಡಿದೆ ಎಂದರೆ ಸರಿ. ಎತ್ತಿನಹೊಳೆ ಕಾಲುವೆಯು ಪೂರ್ವ ಮತ್ತು ಪಶ್ಚಿಮವಾಗಿ ನಿರ್ಮಾಣಗೊಂಡಿದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ನೀಡಲಾಯಿತು.**

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw.1 present he is cross examined in part.

For further cross of Pw.1.

Call on.15.09.2026.